ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
UNIVERSITY OF AGRICULTURAL SCIENCES, BANGALORE
ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು
ICAR - KRISHI VIGYAN KENDRA, KONEHALLI, TIPTUR TQ, TUMAKURU

# ಕಲ್ಪವೃಕ್ಷ

## e - NEWS LETTER /ಇ –ವಾರ್ತಾ ಪತ್ರಿಕೆ

ಸಂಪುಟ: 8 ಜನವರಿ – ಜೂನ್ 2018 ಸಂಚಿಕೆ: 1

## ಬೇಕರಿ ಉತ್ಪನ್ನಗಳ ತಯಾರಿಕೆ ಮತ್ತು ಮಾರುಕಟ್ಟೆ – ಸ್ವ ಉದ್ಯೋಗದ ಕುರಿತು ತರಬೇತಿ ಕಾರ್ಯಕ್ರಮ



ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಮತ್ತು ಬೇಕರಿ ತರಬೇತಿ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ವತಿಯಿಂದ ದಿನಾಂಕ 27.02.2018 ರಂದು "ತೆಂಗಿನ ಕಾಯಿ ಎಣ್ಣೆ ತೆಗೆದ ನಂತರ ಉಳಿದ ಉಪ ಉತ್ಪನ್ನದಿಂದ (ತೆಂಗಿನ ಕಾಯಿ ಹಿಟ್ಟು) ಪ್ರೋಟಿನ್ ಮತ್ತು ನಾರಿನಾಂಶಯುಕ್ತ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆ" ಯೋಜನೆಯಡಿಯಲ್ಲಿ ತರಬೇತಿ ಕಾರ್ಯಕ್ರಮವನ್ನು ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ಗೋವಿಂದ ಗೌಡರವರು ಉದ್ಘಾಟಿಸಿ ತುಮಕೂರು ಜಿಲ್ಲೆಯು ಕಲ್ಪತರು ನಾಡಗಿದ್ದು ತೆಂಗಿನ ಉತ್ಪಾದನೆಯಲ್ಲಿ




ಪ್ರಮುಖವಾಗಿದೆ ಆದರೆ ಮಾರುಕಟ್ಟೆ ಬೆಲೆಯ ಏರುಪೇರಿನಿಂದ ರೈತರಿಗೆ ನಿರ್ಧಿಷ್ಟ ಬೆಲೆ ಸಿಗದೇ ಇರುವುದರಿಂದ ತೆಂಗಿನ ಮೌಲ್ಯವರ್ದಿತ ಉತ್ಪನ್ನಗಳನ್ನು ತಯಾರಿಸಿ ಅಧಿಕ ಆಧಾಯ ಗಳಿಸಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಬೇಕರಿ ತರಬೇತಿ ಕೇಂದ್ರದ ಡಾ ಮಮತಾರವರು ಪದ್ಧತಿ ಪ್ರಾತ್ಯಕ್ಷಿಕೆ ಮುಖಾಂತರ ಬಿಸ್ಕೆಟ್ಸ್, ಡೊನಟ್ಸ್ ಮತ್ತು ಕೇಕ್‌ಗಳ ತಯಾರಿಕೆ ಹಾಗೂ ಮಾರುಕಟ್ಟೆ ವ್ಯವಸ್ಥೆ ಹಾಗೂ ಆರೋಗ್ಯದಲ್ಲಿ ತೆಂಗಿನ ಮಹತ್ವದ ಕುರಿತು ಪರಿಚಯಿಸಿದರು. ಈ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಹಾಗೂ ಸುಮಾರು 100 ರೈತ ಮತ್ತು ರೈತ ಮಹಿಳೆಯರು ಭಾಗವಹಿಸಿದ್ದರು.

## ವಿಶ್ವ ಪರಿಸರ ದಿನ – 2018

ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ಕೃಷಿ ಸಂಶೋದನಾ ಕೇಂದ್ರ, ಕೊನೇಹಳ್ಳಿ, ಜ್ಞಾನಜ್ಯೋತಿ ಆರ್ಥಿಕ ಸಾಕ್ಷರತಾ ಸಂಸ್ಥೆ, ತಿಪಟೂರು ಹಾಗೂ ಜಾನುವಾರು ಸಂಶೋದನಾ ಮತ್ತು ಮಾಹಿತಿ ಕೇಂದ್ರ, ಕೊನೇಹಳ್ಳಿ ವತಿಯಿಂದ ದಿನಾಂಕ: 05.06.2018 ರಂದು ವಿಶ್ವ ಪರಿಸರ ದಿನವನ್ನು ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಪಾಲಿಟೆಕ್ನಿಕ್ ಕಾಲೇಜು, ಜಾನುವಾರು ಸಂಶೋದನಾ ಮತ್ತು ಮಾಹಿತಿ ಕೇಂದ್ರ, ಕೊನೇಹಳ್ಳಿ ಪ್ರಾಂಶುಪಾಲರಾದ ಡಾ. ಶಿವಕುಮಾರ್‌ರವರು ಉದ್ಘಾಟಿಸಿ ಪ್ಲಾಸ್ಟಿಕ್ ಬಳಕೆಯಿಂದ ಜಾನುವಾರುಗಳಿಗಾಗುವ ದುಷ್ಪರಿಣಾಮಗಳನ್ನು ವಿವರಿಸಿದರು.



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಾವಯವ ಹಾಗೂ ನೈಸರ್ಗಿಕ ಕೃಷಿಕರಾದ ಗುಬ್ಬಿಯ ಶ್ರೀ. ಮಹೇಶ್‌ರವರು ಭಾಗವಹಿಸಿ ತಮ್ಮ ಕೃಷಿ ಅನುಭವ, ಪರಿಸರ ಸಂರಕ್ಷಣೆಯಲ್ಲಿ ಸಾವಯವ ಮತ್ತು ನೈಸರ್ಗಿಕ ಕೃಷಿಯ ಪಾತ್ರ ಮತ್ತು ತಮ್ಮ ಕ್ಷೇತ್ರದಲ್ಲಿ ಅಳವಡಿಸಿಕೊಂಡಿರುವ ಪರಿಸರ ಕಾಳಜಿಯ ತಂತ್ರಜ್ಞಾನಗಳನ್ನು ಪರಿಚಯಿಸಿದರು. ಅತಿಥಿಗಳಾಗಿ ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥರಾದ ಡಾ. ಯೋಗೀಶ್ ಭಾಗವಹಿಸಿ ಆಧುನಿಕ ತಂತ್ರಜ್ಞಾನಗಳು ಪರಿಸರ ಮಾಲಿನ್ಯದ ಮೂಲ ಕಾರಣಗಳಾಗಿದ್ದು ಅವುಗಳ ಬಳಕೆಯಲ್ಲಿ ನಿಯಂತ್ರಣವಿರಬೇಕೆಂದು ತಿಳಿ ಹೇಳಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರಾದ ಡಾ. ಗೋವಿಂದ ಗೌಡ ರವರು ವಹಿಸಿಕೊಂಡು ಇತ್ತೀಚಿನ ದಿನಗಳಲ್ಲಿ ಪರಿಸರ ಮಾಲಿನ್ಯವು ಅಧಿಕ ಪ್ರಮಾಣದಲ್ಲಿ ಇರುವುದು ಕಂಡುಬಂದಿದ್ದು ಅವುಗಳ ನಿಯಂತ್ರಣವು ಎಲ್ಲರ ಭಾಗವಾಗಿದ್ದು ತ್ಯಾಜ್ಯ ನಿರ್ವಹಣೆಯಲ್ಲಿ ಹೆಚ್ಚಿನ ಒತ್ತನ್ನು ನೀಡಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಐಟಿ ಕೆಲಸ ನಿರ್ವಹಿಸಿ ತದನಂತರ ಕೃಷಿಯತ್ತ ಒಲವು ನೀಡಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀ ಹರ್ಷಿತರವರು ತಮ್ಮ ಅನುಭವವನ್ನು ಹಂಚಿಕೊಂಡರು. ಈ ಕಾರ್ಯಕ್ರಮದಲ್ಲಿ ಜ್ಞಾನಜ್ಯೋತಿ ಆರ್ಥಿಕ ಸಾಕ್ಷರತಾ ಸಂಸ್ಥೆ ತಿಪಟೂರಿನ ಶ್ರೀಮತಿ ರೇಖಾ, ಜಾನುವಾರು ಸಂಶೋದನಾ ಮತ್ತು ಮಾಹಿತಿ ಕೇಂದ್ರ ಕೊನೇಹಳ್ಳಿಯ ವಿದ್ಯಾರ್ಥಿಗಳು, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ಬಿಎಸ್‌ಸಿ (ಕೃಷಿ ) ವಿದ್ಯಾರ್ಥಿಗಳು ಹಾಗೂ ರೈತ ಭಾಂದವರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಶ್ರೀ. ಮಹೇಶ್‌ರವರಿಗೆ ಸನ್ಮಾನಿಸಲಾಯಿತು ಹಾಗೂ ಕೇಂದ್ರದಲ್ಲಿ ಗಿಡಗಳನ್ನು ನೆಡಲಾಯಿತು.



## ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ಕಾರ್ಯಕ್ರಮ

ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಿಪಟೂರು ವತಿಯಿಂದ ದಿನಾಂಕ: 28 ಮತ್ತು 29ನೇ ಜೂನ್ 2018 ರಂದು ಆರ್ಥಿಕ ಸಾಕ್ಷರತೆ ಮತ್ತು ಅಪೌಷ್ಠಿಕತೆ ನಿರ್ವಹಣೆ ಕುರಿತು 2 ದಿನ ತರಬೇತಿ ಕಾರ್ಯಕ್ರಮವನ್ನು ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ನಿಮಿತ್ತ ಉದ್ಘಾಟನೆಯನ್ನು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಗೋವಿಂದ ಗೌಡ ರವರು ನೆರವೇರಿಸಿ ಇಂತಹ ಕಾರ್ಯಕ್ರಮಗಳು ಸ್ಥಳೀಯ ಮಟ್ಟದಲ್ಲಿ ಆರ್ಥಿಕ ಜ್ಞಾನ ಹಾಗೂ ಅಪೌಷ್ಠಿಕತೆ ನಿರ್ವಹಣೆಯಲ್ಲಿ ಪ್ರಮುಖವಾದ ಹೆಜ್ಜೆಗಳಾಗಿದ್ದು ಗ್ರಾಮ ಮಟ್ಟದಲ್ಲಿ ಅಪೌಷ್ಠಿಕತೆ ನಿರ್ವಹಣೆಯಲ್ಲಿ ಉತ್ತೇಜನಕಾರಿಯಾಗಿ ನಿರ್ವಹಿಸಲು ಸಹಾಯವಾಗುತ್ತವೆ ಎಂದು ಹೇಳಿದರು. ಶಿಶು ಅಭಿವೃದ್ಧಿ ಇಲಾಖೆಯ ಅಧಿಕಾರಿಯಾದ ಶ್ರೀಮತಿ ಪ್ರೇಮಾರವರು ಮಾತನಾಡಿ ಕೃಷಿ ವಿಜ್ಞಾನ ಕೇಂದ್ರವು ಇಲಾಖೆಯ ಅಧಿಕಾರಿಗಳ ಜ್ಞಾನ ಮಟ್ಟ ವೃದ್ಧಿಸಲು ಉತ್ತಮ ಸಹಕಾರವನ್ನು ಕೊಡುತ್ತಿದ್ದು ಉಳಿದಂತೆ ಸ್ತ್ರೀ ಶಕ್ತಿ ಸಂಘಗಳ ಸದಸ್ಯರಿಗೂ ತರಬೇತಿ ನೀಡಬೇಕೆಂದು ಕೇಳಿಕೊಂಡರು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಜ್ಞಾನಜ್ಯೋತಿ ಆರ್ಥಿಕ ಸಾಕ್ಷರತೆ ಸಂಸ್ಥೆ ತಿಪಟೂರಿನ ಶ್ರೀಮತಿ ರೇಖಾ ಮತ್ತು ಮೌಲ್ಯವರ್ಧಿತ ಉತ್ಪನ್ನ ತಯಾರಿಕೆ ಪ್ರಾತ್ಯಕ್ಷಿಕೆ ಮಾಡಲು ಬಿಳಿಗೆರೆಯ ಶ್ರೀಮತಿ ಯಶೋದ, ಕೇಂದ್ರದ ವಿಜ್ಞಾನಿಗಳಾದ ಡಾ. ಶ್ರೀನಿವಾಸ್, ಡಾ. ನಾಗಪ್ಪ ದೇಸಾಯಿ, ಡಾ. ಶಂಕರ ಎಂ.ಹೆಚ್, ಡಾ. ಅನಿತಾ ಹಾಗೂ ತಿಪಟೂರು ತಾಲ್ಲೂಕಿನ ಸುಮಾರು 45 ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದ್ದರು





# ಹಲಸಿನ ಮೌಲ್ಯವರ್ಧನೆ ಮತ್ತು ಸಂಸ್ಕರಣೆ ತರಬೇತಿ ಕಾರ್ಯಕ್ರಮ



ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ ವತಿಯಿಂದ ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ ಪ್ರಾಯೋಜಿತ ರೈತರ ಆಧಾಯ ಮತ್ತು ಕಲ್ಯಾಣ ವೃದ್ಧಿ ಯೋಜನೆಯಡಿ ಹುಲ್ಲುಕಟ್ಟೆ ಗ್ರಾಮದಲ್ಲಿ ದಿನಾಂಕ 28.06.2018 ರಂದು ಹಲಸಿನ ಮೌಲ್ಯವರ್ಧನೆ ಮತ್ತು ಸಂಸ್ಕರಣೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಗೋವಿಂದ ಗೌಡ ರವರು ನೆರವೇರಿಸಿ ಗ್ರಾಮ ಮಟ್ಟದಲ್ಲಿ ದೊರಕುವ ಬೆಳೆ ಮತ್ತು ಹಣ್ಣುಗಳಿಗೆ ಮೌಲ್ಯವರ್ಧನೆ ಮಾಡಿ ಮಾರುಕಟ್ಟೆ ಮಾಡುವುದರಿಂದ ರೈತರು ತಾವು ಬೆಳೆದ ಬೆಳೆಗೆ ಅಧಿಕ ಆಧಾಯ ಗಳಿಸಬಹುದೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ



ಕೊರಟಗೆರೆ ತಾಲ್ಲೂಕಿನ ತೋವಿನಕೆರೆ ಗ್ರಾಮದ ಹಳ್ಳಿಸಿರಿ ಸಂಘದ ಶ್ರೀ. ಪದ್ಮರಾಜ್, ಮಂಜಮ್ಮ ಹಾಗೂ ಇತರೆ ಸದಸ್ಯರ ಜೊತೆ ಹಲಸಿನ ಹೋಳಿಗೆ, ಜಿಪ್ಸ್, ಬೋಂಡಾ ಮತ್ತು ಹಪ್ಪಳ ಮಾಡುವುದನ್ನು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ನಾಗಪ್ಪ ದೇಸಾಯಿ ಹಾಗೂ ಕೃಷಿ ಸಂಶೋಧನಾ ಕೇಂದ್ರ, ಕೊನೇಹಳ್ಳಿಯ ಮುಖ್ಯಸ್ಥರಾದ ಡಾ. ಯೋಗೀಶ್, ಯೋಜನೆಯ ಸಂಶೋಧನಾ ಸಹಾಯಕರಾದ ಕುಮಾರಿ ವೀಣಾ, ಕ್ಷೇತ್ರ ಸಹಾಯಕರಾದ ಕರಿಯಪ್ಪ ಹಾಗೂ ಸುಮಾರು 80 ಜನ ರೈತ ಮತ್ತು ರೈತ ಮಹಿಳೆಯರು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಈಚನೂರು ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಶ್ರೀ. ಗಿರೀಶ್ ರವರು ವಹಿಸಿಕೊಂಡಿದ್ದರು.

## ತರಬೇತಿ ಕಾರ್ಯಕ್ರಮಗಳು

### ಒಳಾವರಣ ತರಬೇತಿ ಕಾರ್ಯಕ್ರಮಗಳು

| ಕ್ರ.ಸಂ. | ವಿಷಯ | ದಿನಾಂಕ | ಶಿಬಿರಾರ್ಥಿಗಳು |
|---|---|---|---|
| 1 | ಕೃಷಿ ಬೆಳೆಗಳಲ್ಲಿ ಮಣ್ಣು ಮತ್ತು ನೀರು ನಿರ್ವಹಣೆ | 27.04.2018 | 20 |
| 2 | ಮಾವಿನಲ್ಲಿ ಸಮಗ್ರ ಬೆಳೆ ನಿರ್ವಹಣೆ | 10.05.2018 | 11 |
| 3 | ಹೈನುಗಾರಿಕೆ ನಿರ್ವಹಣೆ | 28.05.2018 | 7 |
| 4 | ರೈತರಿಂದ ರೈತರಿಗೆ ತರಬೇತಿ ಕಾರ್ಯಕ್ರಮ | 29.05.2018 ರಿಂದ 31.05.2018 | 30 |
| 5 | ರೈತರಿಂದ ರೈತರಿಗೆ ತರಬೇತಿ ಕಾರ್ಯಕ್ರಮ | 20.06.2018 ರಿಂದ 22.06.2018 | 30 |
| 6 | ಗ್ರಾಮೀಣಾಭಿವೃದ್ಧಿಗೆ ಪ್ರಧಾನಿ ಉಪಕ್ರಮಗಳು | 20.06.2018 | 47 |
| 7 | ಗ್ರಾಮಿಣ ಮಕ್ಕಳಲ್ಲಿ ಆರ್ಥಿಕ ಸಾಕ್ಷರತೆ ಮತ್ತು ಅಪೌಷ್ಠಿಕತೆಯ ನಿರ್ವಹಣೆ | 28.06.2018 | 45 |
| 8 | ಗ್ರಾಮಿಣ ಮಕ್ಕಳಲ್ಲಿ ಆರ್ಥಿಕ ಸಾಕ್ಷರತೆ ಮತ್ತು ಅಪೌಷ್ಠಿಕತೆಯ ನಿರ್ವಹಣೆ | 29.06.2018 | 38 |

### ಹೊರಾವರಣ ತರಬೇತಿ ಕಾರ್ಯಕ್ರಮಗಳು

| ಕ್ರ.ಸಂ. | ವಿಷಯ | ದಿನಾಂಕ | ಸ್ಥಳ | ಶಿಬಿರಾರ್ಥಿಗಳು |
|---|---|---|---|---|
| 1 | ಹರಳಿನಲ್ಲಿ ಸಮಗ್ರ ಬೆಳೆ ನಿರ್ವಹಣೆ | 08.06.2018 | ಸೋರೆಕಾಯಿ ಪೇಂಟೆ | 44 |

| ಕ್ರ.ಸಂ. | ವಿಷಯ | ದಿನಾಂಕ | ಸ್ಥಳ | ಶಿಬಿರಾರ್ಥಿಗಳು |
|---|---|---|---|---|
| 2 | ರಾಗಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 08.06.2018 | ದೊಡ್ಡಮಾಲೂರು | 43 |
| 2 | ತೊಗರಿಯಲ್ಲಿ ಬೀಜೋಪಚಾರ | 12.06.2018 | ದೊಡ್ಡಕೊಪ್ಪಲು | 64 |
| 3 | ತೊಗರಿ ಮತ್ತು ಮೆಣಸಿನಲ್ಲಿ ಪೋಷಕಾಂಶಗಳ ನಿರ್ವಹಣೆ | 13.06.2018 | ಗೌಡನಕಟ್ಟೆ | 17 |
| 4 | ಬದನೆ ಮತ್ತು ಮೆಣಸಿನಲ್ಲಿ ಸಮಗ್ರ ಬೆಳೆ ನಿರ್ವಹಣೆ | 14.06.2018 | ಮೇಲಿನವಲೆಗೆರೆಹಳ್ಳಿ | 48 |
| 5 | ಬೀಜೋಪಚಾರ ಮತ್ತು ಪೀಡೆನಾಶಕಗಳ ಸುರಕ್ಷಿತ ಬಳಕೆ – ರೈತ ವಿಜ್ಞಾನಿ ಚರ್ಚಾಗೋಷ್ಠಿ | 18.06.2018 | ತಿಪಟೂರು | 53 |
| 6 | ಬೀಜೋಪಚಾರ ಮತ್ತು ಪೀಡೆನಾಶಕಗಳ ಸುರಕ್ಷಿತ ಬಳಕೆ | 20.06.2018 | ಬಿಳಿಗೆರೆ | 89 |
| 7 | ಅಡಿಕೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 25.06.2018 | ಮೂಗನಹುಣಸೆ | 28 |
| 8 | ರಾಗಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 26.06.2018 | ದೊಡ್ಡಮದುರೆ | 43 |
| 9 | ಮಣ್ಣಿನ ಫಲವತ್ತತೆ, ಪೋಷಕಾಂಶಗಳ ನಿರ್ವಹಣೆ ಮತ್ತು ಸಮತೋಲನ ರಸಗೊಬ್ಬರಗಳ ಬಳಕೆ | 28.06.2018 | ದಂಡಿನಶಿವರ | 86 |

ಕ್ಷೇತ್ರೋತ್ಸವಗಳು ಮತ್ತು ಪ್ರಮುಖ ದಿನಗಳ ಆಚರಣೆ

| ಕ್ರ.ಸಂ. | ವಿಷಯ | ದಿನಾಂಕ | ಸ್ಥಳ | ಶಿಬಿರಾರ್ಥಿಗಳು |
|---|---|---|---|---|
| 1 | ವಿಶ್ವ ಪರಿಸರ ದಿನ | 05.06.2018 | ಕೆ.ವಿ.ಕೆ., ಕೊನೇಹಳ್ಳಿ | 62 |
| 2 | ತಂಬಾಕು ನಿಷೇಧ ಜಾಗೃತಿ ಸಪ್ತಾಹ | 06.06.2018 | ತಿಮ್ಲಾಪುರ | 43 |
| 3 | ಪಶು ಆರೋಗ್ಯ ತಪಾಸಣಾ ಶಿಬಿರ ಹಾಗೂ ಕಾಲು ಬಾಯಿ ಜ್ವರದ ಲಸಿಕೆ ಕಾರ್ಯಕ್ರಮ | 18.06.2018 | ಮೂಗುತಿಹಳ್ಳಿ | 77 |
| 4 | ಪಶು ಆರೋಗ್ಯ ತಪಾಸಣಾ ಶಿಬಿರ ಹಾಗೂ ಕಾಲು ಬಾಯಿ ಜ್ವರದ ಲಸಿಕೆ ಕಾರ್ಯಕ್ರಮ | 19.06.2018 | ಹುಲ್ಲುಕಟ್ಟೆ | 81 |
| 5 | ಬರಡು ರಾಸುಗಳ ತಪಾಸಣಾ ಶಿಬಿರ ಹಾಗೂ ಜಂತು ಬಾದೆಗೆ ಉಪಚಾರ | 28.06.2018 | ಗಂಗನಘಟ್ಟ | 91 |
| 6 | ಬರಡು ರಾಸುಗಳ ತಪಾಸಣಾ ಶಿಬಿರ ಹಾಗೂ ಜಂತು ಬಾದೆಗೆ ಉಪಚಾರ | 29.06.2018 | ಬೆಳಗರಹಳ್ಳಿ | 82 |


ಸಂಪಾದಕರು : ಡಾ. ವಿ. ಗೋವಿಂದ ಗೌಡ

ಸಂಪಾದಕೀಯ ಸದಸ್ಯರು : ಶ್ರೀ. ಎಂ. ಹೆಚ್. ಶಂಕರ
ಡಾ. ಕೆ.ಆರ್.ಶ್ರೀನಿವಾಸ
ಶ್ರೀ. ನಾಗಪ್ಪ ದೇಸಾಯಿ
ಡಾ. ಎಮ್.ಎಸ್. ಅನಿತಾ
ಡಾ. ಸ್ನೇಹಾ ಶೀಗಿಹಳ್ಳಿ
ಶ್ರೀಮತಿ. ಅರ್ಜುಮನ್ ಬಾನು

ಸಂಪಾದಕೀಯ ಸದಸ್ಯರು, ಪುಟ ವಿನ್ಯಾಸ & ಅಕ್ಷರ ಜೋಡಣೆ : ಶ್ರೀ. ಪ್ರದೀಪ್ ಕುಮಾರ್ ಹೆಚ್

ಪ್ರಕಾಶಕರು:
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,
ಐ.ಸಿ.ಎ.ಆರ್ –ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ತುಮಕೂರು ಜಿಲ್ಲೆ